ಆ) ಹೆಚ್ಚುವರಿ ಸಿಬ್ಬಂದಿ ಇನ್ನೂ ಮಂಜೂರಾಗಿರುವುದಿಲ್ಲ.

ಈ) ಚಿಕ್ಕಮಗಳೂರು ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕಡೂರು ಜನರಲ್ ಆಸ್ಪತ್ರೆಯಲ್ಲಿರುವ ಹಾಸಿಗೆಗಳನ್ನು ಜಾಸ್ತಿ ಮಾಡುವುದು

೨೧೯೪. ಶ್ರೀ ಪಿ.ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಡೂರು ತಾಲ್ಲೂಕು ಕಡೂರು ಜನರಲ್ ಆಸ್ಪತ್ರೆಯಲ್ಲಿ ಈಗ ಹಾಲಿ ಇರುವ ಹಾಸಿಗೆಗಳ ಜೊತೆಗೆ ೫೦ ಹಾಸಿಗೆ ಮಾಡಲು ಕಳೆದ ವರ್ಷ ಸರ್ಕಾರ ಭರವಸೆ ಇತ್ತಿರುವುದು ನಿಜವೇ?

ಆ) ಜಿಲ್ಲಾ ಪರಿಷತ್ತಿನವರು ಆ ೫೦ ಹಾಸಿಗೆ ಹೆಚ್ಚಿಸಲು ಸಮ್ಮತಿ ಕೊಟ್ಟಿರುವುದಲ್ಲದೆ ಕಡೂರು ರೋಟರಿ ಕ್ಲಬ್‌ನವರು ಅರ್ಧ ಭಾಗ ಹಣ ಕೊಡಲು ಮುಂದೆ ಬಂದಿದ್ದರೂ ಕೂಡ ಸರ್ಕಾರ ಈವರೆಗೆ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ೧೯೮೫-೮೬ಕ್ಕೆ ಅನುಮತಿ ಕೊಟ್ಟು ಕೆಲಸ ಪ್ರಾರಂಭ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಇದನ್ನು ಪರಿಶೀಲಿಸುವುದಾಗಿ ತಿಳಿಸಲಾಗಿತ್ತು.

ಆ) ಜಿಲ್ಲಾ ಪರಿಷತ್ತಿನ ಒಪ್ಪಿಗೆ ಬಂದಿಲ್ಲ. ಕಡೂರು ರೋಟರಿ ಕ್ಲಬ್‌ನವರು ಹೆಚ್ಚುವರಿ ಕಟ್ಟಡದ ವೆಚ್ಚದಲ್ಲಿ ಅರ್ಧ ಭಾಗವನ್ನು ಭರಿಸಲು ಸಿದ್ಧರಿರುವುದಾಗಿ ತಿಳಿಸಿರುತ್ತಾರೆ.

ಇ) ಜಿಲ್ಲಾ ಪರಿಷತ್ ಒಪ್ಪಿಗೆ ನೀಡಿ ಅಗತ್ಯ ಹಣ ಒದಗಿಸಿದಲ್ಲಿ ಮಂಜೂರು ಮಾಡಲಾಗುವುದು.

ಬಳ್ಳಾರಿ ವೈದ್ಯಕೀಯ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳು

೨೨೮೪. ಶ್ರೀ ರೇವಣಸಿದ್ದಯ್ಯ.—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿಯ ವೈದ್ಯಕೀಯ ಕಾಲೇಜಿನಲ್ಲಿ ಖಾಲಿಯಿರುವ ಹುದ್ದೆಗಳು ಎಷ್ಟು (ವರ್ಗವಾರು ವಿವರ ನೀಡುವುದು)

ಆ) ಚರ್ಮ ಚಿಕಿತ್ಸೆ ವಿಭಾಗದಲ್ಲಿ ಕೇವಲ ಒಂದೆ ಯೂನಿಟ್ಟಿದ್ದು ಸ್ನಾತಕೋತ್ತರ ವ್ಯಾಸಂಗವಿರುವುದರಿಂದ ವಿಭಾಗದ ಕೆಲಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಇ) ಸ್ನಾತಕೋತ್ತರ ವ್ಯಾಸಂಗವಿರುವ ಕಡೆ ಕನಿಷ್ಟ ಎರಡು ಯೂನಿಟ್ಟು ಇರಬೇಕೆಂಬುದು ನಿಜವಲ್ಲವೆ ಹಾಗಿದ್ದಲ್ಲಿ, ಯಾವಾಗ ಇನ್ನೊಂದು ಯೂನಿಟ್ಟು ಪ್ರಾರಂಭಿಸಲಾಗುವುದು:

ಈ) ಸದರಿ ಕಾನೂನಿನಲ್ಲಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಜರೂರು ಕ್ರಮ ಕೈಗೊಳ್ಳುವುದೇ:

ಉ) ಕಾಲೇಜಿನಲ್ಲಿ ಅಗತ್ಯವಿರುವ ಅನೇಕ ಸಾಮಗ್ರಿಗಳ ಕೊರತೆಯಿದ್ದು ಈ ಸಾಮಗ್ರಿಗಳನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ಬಳ್ಳಾರಿ ವೈದ್ಯಕೀಯ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ :

೧)	ಪ್ರಾಧ್ಯಾಪಕರು ...	೧೯
೨)	ಸಹಾಯಕ ಪ್ರಾಧ್ಯಾಪಕರ ...	೨೩
೩)	ಉಪನ್ಯಾಸಕರು ...	೫೫

ಆ) ಬಂದಿದೆ.

ಇ) ಎರಡನೆಯ ಘಟಕವನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ಹೌದು.

ಎಣಿಕೆದಾರರ ಹುದ್ದೆಗಳಿಗೆ ಅನುಮತಿ ನೀಡುವಲ್ಲಿ ವಿಳಂಬವಾಗಿರುವುದು

೨೦೪೮. ಶ್ರೀ ಎ. ಕೃಷ್ಣಪ್ಪ (ಪರ್ತೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರು ಎಣಿಕೆದಾರರ (ಎನ್ಯೂಮರೇಟರ್ಸ್) ಹುದ್ದೆಯನ್ನು ಭರ್ತಿ ಮಾಡುವ ಸಂಬಂಧದಲ್ಲಿ ಐಎಫ್ಎಸ್ ೧೬೩ ಡಿಎಸ್ಇ ೮೬ನೇ ಸಂಖ್ಯೆಯ ಕಡತವನ್ನು ಒಪ್ಪಿಗೆಗಾಗಿ ಆರ್ಥಿಕ ಇಲಾಖೆಯವರಿಗೆ ಯಾವಾಗ ಸ್ವೀಕರಿಸಿದ್ದಾರೆ?

ಆ) ಆರ್ಥಿಕ ಇಲಾಖೆಯವರು ಸದರಿ ಕಡತಕ್ಕೆ ಒಪ್ಪಿಗೆ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಇ) ಹಾಗಿದ್ದಲ್ಲಿ, ಅನುಮತಿಯನ್ನು ಯಾವಾಗ ನೀಡಲಾಗುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ದಿನಾಂಕ ೨೧-೪-೧೯೮೮ರಂದು ಸ್ವೀಕರಿಸಲಾಯಿತು.

ಆ) ಮತ್ತು ಇ) ಆರ್ಥಿಕ ಇಲಾಖೆಯ ಅಭಿಪ್ರಾಯದೊಂದಿಗೆ ಕಡತವನ್ನು ಇಲಾಖೆಗೆ ದಿನಾಂಕ ೫-೫-೧೯೮೮ರಂದು ಹಿಂದಿರುಗಿಸಲಾಗಿದೆ.

ಮಂಡಕೇರಿ ಜನರಲ್ ಆಸ್ಪತ್ರೆಯ ಬಗ್ಗೆ

೨೩೦೭. ಡಿ. ಎ. ಚಿನ್ನಪ್ಪ (ಮಂಡಿಕೇರಿ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡಿಕೇರಿಯಲ್ಲಿರುವ ಜನರಲ್ ಆಸ್ಪತ್ರೆಯಲ್ಲಿ ಸುಮಾರು ನಾಲ್ಕು ತಿಂಗಳಿಂದ ಎರಡು ಎಕ್ಸ್-ರೇ ಯುನಿಟ್‌ಗಳು ಕೆಟ್ಟು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಇದೇ ಆಸ್ಪತ್ರೆಗೆ ಸೇರಿರುವ ದಾದಿಯರಿಗೆ ಕಲ್ಪಿಸಿರುವ ವಸತಿ ಗೃಹ ಬಿದ್ದು ಹೋಗಿರುವುದರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರದವರು ಈ ಮೇಲ್ಕಾಣಿಸಿದ ತೊಂದರೆಗಳನ್ನು ಸರಿಪಡಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳುವರೇ?

ಶ್ರೀ ಎನ್. ರಾಚಯ್ಯ (ಆರೋಗ್ಯ ಸಚಿವರು).—

ಅ) ಬಂದಿದೆ.

ಆ) ಬಂದಿದೆ.